**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಸನಗರ .**

# ಸಿ.ಸಿ. ನಂ.701/2023

ಫಿರ್ಯಾದಿ : ಕರ್ನಾಟಕ ಸರ್ಕಾರ
ರಿಪ್ಪನ್ ಪೇಟೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : ಸಿದ್ದೇಶ ಬಿ ಜಿ

## ದೋಷಾರೋಪಣೆ

ನಾನು ಫಾರೂಖ ಝಾರೆ ಬಿ,ಎ,(ಲಾ) ಎಲ್.ಎಲ್.ಬಿ, ಎಲ್.ಎಲ್.ಎಂ, ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಸನಗರ. ಆದ ನಾನು

ಆರೋಪಿತರು : 1. ಸಿದ್ದೇಶ ಬಿ ಜಿ ತಂದೆಃ ಗಣಪತಿ,
ವಯಸ್ಸುಃ 23 ವರ್ಷ,
ವಾಸಃ ಸಿದ್ದಪ್ಪನ ಗುಡಿ, ಬೆನವಳ್ಳಿ ಗ್ರಾಮ,
ಹೊಸನಗರ ತಾಲೂಕು.

ನಿಮ್ಮಗಳ ಮೇಲೆ ಈ ಕೆಳಕಂಡ ದೋಷಾರೋಪಗಳನ್ನು ಇಟ್ಟಿರುತ್ತೇನೆ.

ದಿನಾಂಕ **೦೮-೧೨-೨೦೨೨** ರಂದು ಬೆಳಿಗ್ಗೆ **೧೦-೩೦** ಗಂಟೆ ಸಮಯದಲ್ಲಿ ಹೊಸನಗರ ತಾಲ್ಲೂಕು ರಿಪ್ಪನಪೇಟೆ ಪೋಲಿಸ್ ಠಾಣಾ ವ್ಯಾಪ್ತಿಯ ಬೆನವಳ್ಳಿ ಗ್ರಾಮ ಸಿದ್ದಪ್ಪನಗುಡಿ ಬಸ್ಸು ನಿಲ್ದಾಣದ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯಾದ ನೀವು ಬೀಡಿಯಲ್ಲಿ ಗಾಂಜಾ ಸೊಪ್ಪನ್ನು ಹಾಕಿಕೊಂಡು ಸೇವನೆ ಮಾಡಿ ಓಲಾಡುತ್ತಾ ಅಸಭ್ಯವಾಗಿ ವರ್ತಿಸುತ್ತಿದ್ದು, ಸಾಕ್ಷಿ-**೧** ಮತ್ತು ಸಾಕ್ಷಿ-**೨** ರವರು ಧಾಳಿ ನಡೆಸಿ ನಿಮ್ಮನ್ನು ಹಿಡಿದು ತಂದು ಠಾಣೆಯಲ್ಲಿ ಹಾಜರುಪಡಿಸಿದ್ದು, ನೀವು ಗಾಂಜಾವನ್ನು ಸೇವನೆ ಮಾಡಿರುವ ಬಗ್ಗೆ ವೈಧ್ಯಕೀಯ ಪರೀಕ್ಷೆಯಿಂದ ದೃಢಪಟಿದ್ದು, ಆ ಮೂಲಕ ನೀವು ಮಾದಕ ದ್ರುವ್ಯಗಳು ಮತ್ತು ಸೈಕೋಟ್ರೊಪಿಕ್ ವಸ್ತುಗಳ ಬಳಕೆ ನಿಷೇಧ ಕಾಯ್ದೆ 1985 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ದೋಷಾರೋಪಣೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ಪ್ರಶ್ನೆ: ಈಗ ಮೇಲೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪವನ್ನು ಒಪ್ಪಿಕೊಳ್ಳುವಿರೊ ಅಥವಾ ವಿಚಾರಣೆಯಾಗಬಯಸುವಿರೋ?

ಉತ್ತರ:

ಈ ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಕೇಳಲಾಗಿ ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು.

ದಿನಾಂಕ: 25-06-2024

**(ಫಾರೂಖ್ ಝಾರೆ)**
ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸನಗರ.

ಆರೋಪಿತರ ಸಹಿ: